(ಇಂದು ದಿಃ 10-08-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣವಚನ ಬೋದಿಸಲಾಯಿತು)

**ಪಾಟಿ ಸವಾಲು ಃ- ಪ್ರತಿವಾದಿ ಪರ ವಕೀಲರಿಂದ ಃ-**

ನಾನು ಪಿ.ಯು.ಸಿ ವರೆಗೆ ವಿದ್ಯಾಭ್ಯಾಸ ಮಾಡಿದ್ದೇನೆ. ನನಗೆ ಕನ್ನಡ ಓದಲು ಬರೆಯಲು ಬರುತ್ತಿದ್ದು ಇಂಗ್ಲೀಷ್ ಅಲ್ಪ ಸ್ವಲ್ಪ ಓದಲು ಬರುತ್ತದೆ. ನಾನು ಅನೇಕಲ್ ತಾಲ್ಲೂಕಿನ ಕರಿಯಪ್ಪನಹಳ್ಳಿಯಲ್ಲಿ ಹುಟ್ಟಿ ಬೆಳೆದಿರುತ್ತೇನೆ. ಪ್ರತಿವಾದಿ ಮುನಿಯಪ್ಪ ಆನೇಕಲ್ ತಾಲ್ಲೂಕಿನ ಜಂಗಲ್ ಪಾಳ್ಯದಲ್ಲಿ ಹುಟ್ಟಿ ಬೆಳೆದಿರುತ್ತಾರೆ. ನಮ್ಮ ಊರಿನಿಂದ ಪ್ರತಿವಾದಿಯ ಊರು ಸುಮಾರು ಅರ್ಧ ಕಿ.ಮಿ ದೂರದಲ್ಲಿ ಇದೆ. ನಮ್ಮ ಊರಿನಿಂದ ಪ್ರತಿವಾದಿಯ ಊರು ಸುಮಾರು ಅರ್ಧ ಕಿ.ಮಿ. ದೂರದಲ್ಲಿ ಇರುವುದರಿಂದ ಪ್ರತಿವಾದಿಯ ಬಗ್ಗೆ ಪ್ರತಿವಾದಿಯ

ಕುಟುಂಬದ ಬಗ್ಗೆ ಹಾಗೂ ಪ್ರತಿವಾದಿಯ ಕುಟುಂಬಕ್ಕೆ ಇರುವ ಆಸ್ತಿಗಳ ಬಗ್ಗೆ ನನಗೆ ಗೊತ್ತು. ಮುನಿಯಪ್ಪನ ತಂದೆ ಹೆಸರು ಭಾವಾಜಪ್ಪ ಇರುತ್ತದೆ. ಈ ದಾವೆಯನ್ನು ಸಲ್ಲಿಸುವಾಗ ಪ್ರತಿವಾದಿಯ ತಂದೆ ಹೆಸರನ್ನು ಭಾವಾಜಿ ಎಂದು ಸುಳ್ಳು ಬರೆಸಿರುತ್ತೇನೆ ಎಂದರೆ ಸರಿಯಲ್ಲ. ಭಾವಾಜಪ್ಪನಿಗೆ ಮುನಿಯಪ್ಪ ಹಾಗೂ ಮುನಿಸ್ವಾಮಿಮಪ್ಪ ಎಂಬ ಇಬ್ಬರು ಮಕ್ಕಳು ಇರುತ್ತಾರೆ ಎಂದರೆ ನಿಜ. ಸಾಕ್ಷಿ ಮುಂದುವರೆದು ದಾವಲ್ ಸಿದ್ದಪ್ಪ ಭಾವಜಪ್ಪನ ಸಾಕುಮಗ ಸಹ ಇರುತ್ತಾರೆ ಎಂದು ಹೇಳುತ್ತಾರೆ. ಭಾವಾಜಪ್ಪನಿಗೆ ನಾನು ಹೇಳಿದಂತೆ ದಾವಲ್ ಸಿದ್ದಪ್ಪ ಎನ್ನುವ ಸಾಕು ಮಗ ಇರಲಿಲ್ಲ ಎಂದರೆ ಸರಿಯಲ್ಲ. ದಾವಲ್ ಸಿದ್ದಪ್ಪ ಭಾವಜಪ್ಪನ ಸಾಕು ಮಗ ಎಂದು ಹೇಳಲು ನಾನು ಯಾವುದೇ ದಾಖಲೆ ನೋಡಿಲ್ಲ.

**(ವಿನಂತಿ ಮೇರೆಗೆ ಪಾಟಿ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ವಿಚಾರಣೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಎ ನು.,

ಪ್ರಧನಾ ಹಿ.ಸಿ.ಜೆ., ಆನೇಕಲ್.